143-6
272-109

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರು ನಿಯಮ-72ರಡಿ ಮಂಡಿಸಿರುವ ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಹೇಳಿಕೆ.**

**ವಿಷಯ:-** "ಶಿವಮೊಗ್ಗ ಜಿಲ್ಲೆಯಾದ್ಯಂತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಮಸ್ಯೆಗಳ ಕುರಿತು".

**ಉತ್ತರ**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಈ ಯೋಜನೆಯು 1975 ರಿಂದ ಜಾರಿಗೆ ಬಂದಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 204 ಶಿಶು ಅಭಿವೃದ್ಧಿ ಯೋಜನೆಗಳ ಮೂಲಕ 66361 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ 66361 ಅಂಗನವಾಡಿ ಕಾರ್ಯಕರ್ತೆಯರು ಮತ್ತು 63531 ಅಂಗನವಾಡಿ ಸಹಾಯಕಿಯರು ಹುದ್ದೆಗಳು ಮಂಜೂರಾಗಿರುತ್ತದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುತ್ತಿರುವ ಗೌರವಧನದ ವಿವರ ಈ ಕೆಳಕಂಡಂತಿದೆ:-

(ರೂ. ಸಾವಿರಗಳಲ್ಲಿ)

| ವಿವರ | ವಿಂಗಡನೆ | ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಗೌರವಧನ | ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ನೀಡುತ್ತಿರುವ ಗೌರವಧನ | ಒಟ್ಟು |
|---|---|---|---|---|
| ಅಂಗನವಾಡಿ ಕಾರ್ಯಕರ್ತೆ | 10 ವರ್ಷಕ್ಕಿಂತ ಕಡಿಮೆ ವರ್ಷ ಸೇವೆ ಸಲ್ಲಿಸಿದವರಿಗೆ | 4500 | 6500 | 11000 |
| | 10 ರಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ | | 6750 | 11250 |
| | 20 ಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ | | 7000 | 11500 |
| ಅಂಗನವಾಡಿ ಸಹಾಯಕಿ | 10 ವರ್ಷಕ್ಕಿಂತ ಕಡಿಮೆ ವರ್ಷ ಸೇವೆ ಸಲ್ಲಿಸಿದವರಿಗೆ | 2500 | 3750 | 6250 |
| | 10 ರಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ | | 4000 | 6500 |
| | 20 ಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ | | 4250 | 6750 |
| ಮಿನಿ ಅಂಗನವಾಡಿ ಕಾರ್ಯಕರ್ತೆ | 10 ವರ್ಷಕ್ಕಿಂತ ಕಡಿಮೆ ವರ್ಷ ಸೇವೆ ಸಲ್ಲಿಸಿದವರಿಗೆ | 3500 | 3750 | 7250 |
| | 10 ರಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ | | 4000 | 7500 |
| | 20 ಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ | | 4250 | 7750 |

**ಗೌರವಧನ ಪಾವತಿಸಲು ಇರುವ ಸಮಸ್ಯೆ:-**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಗೌರವಧನ ಹಾಗೂ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಗಳು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಕಡ್ಡಾಯವಾಗಿ ಪಿ.ಎಫ್.ಎಂ.ಎಸ್. ತಂತ್ರಾಂಶದಲ್ಲಿಯೇ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿರುತ್ತದೆ.

ಆದರೆ 2022-23ನೇ ಸಾಲಿನ ಆಯವ್ಯಯ ಸಂಪುಟಗಳಲ್ಲಿ ಪ್ರಸ್ತಾಪಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಪ್ರತ್ಯೇಕಿಸಿ 2022-23ನೇ ಸಾಲಿನ ಪೂರಕ ಅಂದಾಜು-1ನೇ ಕಂತಿನಲ್ಲಿ ನಿಗದಿಪಡಿಸಿದ್ದು, ಸದರಿ ಮೊತ್ತವನ್ನು ವಿನಿಯೋಗಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯು ದಿನಾಂಕ: 19-10-2022ರ ಪತ್ರದಲ್ಲಿ ಅನುಮತಿ ನೀಡಲಾಗಿರುತ್ತದೆ.

ಅದರಂತೆ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಪ್ರತ್ಯೇಕಿಸಿ ತಾಲ್ಲೂಕುವಾರು ಹೊಸ ಲೆಕ್ಕ ಶೀರ್ಷಿಕೆಯಡಿ ಪ್ರಸ್ತಾಪಿತ ಕಾರ್ಯಕ್ರಮಗಳಡಿ ಮರುಹಂಚಿಕೆ ಗೊಳಿಸಿ ಖಜಾನೆ-2 ತಂತ್ರಾಂಶದಲ್ಲಿ ಅಳವಡಿಸಿ ಬಿಡುಗಡೆಗೊಳಿಸಲು ವಿಳಂವಾಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಗೌರವಧನ ಪಾವತಿಗೆ ಸಂಬಂಧಿಸಿದಂತೆ ಡಿಸೆಂಬರ್-2022ರ ಅಂತ್ಯದವರೆಗೆ ಅನುದಾನವನ್ನು ಬಿಡುಗಡೆ ಗೊಳಿಸಲಾಗಿರುತ್ತದೆ. ಶಿವಮೊಗ್ಗ ಜಿಲ್ಲೆಯ 7 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಗೌರವಧನವನ್ನು ನವೆಂಬರ್-2022ರವರೆಗೆ ಪಾವತಿಸಲಾಗಿದೆ.

**<u>ಹಾಲು ಮೊಟ್ಟೆ ಹಣ ಪಾವತಿಸಲು ಇದ್ದ ಸಮಸ್ಯೆ:-</u>**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮಗಳು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಕಡ್ಡಾಯವಾಗಿ ಪಿ.ಎಫ್.ಎಂ.ಎಸ್. ತಂತ್ರಾಂಶದಲ್ಲಿಯೇ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿರುತ್ತದೆ.

ಆದರೆ 2022-23ನೇ ಸಾಲಿನ ಆಯವ್ಯಯ ಸಂಪುಟಗಳಲ್ಲಿ ಪ್ರಸ್ತಾಪಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಪ್ರತ್ಯೇಕಿಸಿ, ಇದರ ಜೊತೆಗೆ ರಾಜ್ಯ ಸರ್ಕಾರದ ಹೆಚ್ಚುವರಿ ಕಾರ್ಯಕ್ರಮಗಳಾದ ಕ್ಷೀರಭಾಗ್ಯ, ಸೃಷ್ಠಿ ಹಾಗೂ ಮಾತೃಪೂರ್ಣ ಯೋಜನೆಗಳಿಗೆ ಸಂಬಂಧಿಸಿದಂತೆ ಹೊಸ ಲೆಕ್ಕ ಶೀರ್ಷಿಕೆಯನ್ನು 2022-23ನೇ ಸಾಲಿನ ಪೂರಕ ಅಂದಾಜು-1ನೇ ಕಂತಿನಲ್ಲಿ ಒದಗಿಸಲಾಗಿರುತ್ತದೆ. ಹಾಗೂ ಹೊಸದಾಗಿ ಸೃಜಿಸಲಾಗಿರುವ ಲೆಕ್ಕ ಶೀರ್ಷಿಕೆಯಲ್ಲಿ ನಿಗದಿಪಡಿಸಲಾಗಿದ್ದ ಅನುದಾನವನ್ನು ವಿನಿಯೋಗಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯು ದಿನಾಂಕ: 19-10-2022ರ ಪತ್ರದಲ್ಲಿ ಅನುಮತಿ ನೀಡಲಾಗಿರುತ್ತದೆ.

ಅದರಂತೆ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಪ್ರತ್ಯೇಕಿಸಿ ತಾಲ್ಲೂಕುವಾರು ಹೊಸ ಲೆಕ್ಕ ಶೀರ್ಷಿಕೆಯಡಿ ಪ್ರಸ್ತಾಪಿತ ಕಾರ್ಯಕ್ರಮಗಳಡಿ ಮರುಹಂಚಿಕೆಗೊಳಿಸಿ ಖಜಾನೆ-2 ತಂತ್ರಾಂಶದಲ್ಲಿ ಅಳವಡಿಸಿ ಬಿಡುಗಡೆಗೊಳಿಸಲು ವಿಳಂಬವಾಗಿರುತ್ತದೆ.

ಪ್ರಸ್ತುತ ಹೊಸದಾಗಿ ಸೃಜಿಸಿರುವ ಲೆಕ್ಕ ಶೀರ್ಷಿಕೆಯಡಿ ಕ್ಷೀರಭಾಗ್ಯ, ಸೃಷ್ಠಿ ಹಾಗೂ ಮಾತೃಪೂರ್ಣ ಯೋಜನೆಯ ಅನುಷ್ಠಾನಕ್ಕಾಗಿ ಸೆಪ್ಟೆಂಬರ್-22 ರಿಂದ ಡಿಸೆಂಬರ್-22 ರವರೆಗೆ ಅನುದಾನವನ್ನು ದಿನಾಂಕ: 08-12-2022ರಲ್ಲಿ ತಾಲ್ಲೂಕುಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಈ ಮೇಲಿನಂತೆ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕಡ್ಡಾಯವಾಗಿ ಪಿ.ಎಫ್.ಎಂ.ಎಸ್. ಮೂಲಕ ಅನುಷ್ಠಾನಗೊಳಿಸಬೇಕಿದ್ದ ಕಾರಣದಿಂದಾಗಿ 2022-23ನೇ ಸಾಲಿನಲ್ಲಿ ಪೂರಕ ಅಂದಾಜು-1ನೇ ಕಂತಿನಲ್ಲಿ ಹೊಸ ಲೆಕ್ಕ ಶೀರ್ಷಿಕೆಗಳ ಸೃಜನೆ, ಕೇಂದ್ರ ಸರ್ಕಾರದಿಂದ ನಿಗದಿತ ಅವಧಿಯೊಳಗೆ ಅನುದಾನ ಬಿಡುಗಡೆಯಾಗದೆಯಿರುವ ಹಿನ್ನೆಲೆಯಲ್ಲಿ ಹಾಗೂ ಕೆಲವೊಂದು ತಾಂತ್ರಿಕ/ಆಡಳಿತಾತ್ಮಕ ಕಾರಣಗಳಿಂದಾಗಿ ಅನುದಾನ

ಬಿಡುಗಡೆಗೊಳಿಸಲು ವಿಳಂಬವಾಗಿದ್ದು, ಮುಂದಿನ ದಿನಗಳಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮವಹಿಸಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯನ್ನು ಹೊರತುಪಡಿಸಿ ಉಳಿದೆಲ್ಲಾ ಯೋಜನೆಗಳಿಗೆ ನವೆಂಬರ್ ಮಾಹೆಯವರೆಗೆ ಮೊಟ್ಟೆ ಹಣವನ್ನು ಬಾಲವಿಕಾಸ ಸಮಿತಿ ಖಾತೆಗೆ ಜಮೆ ಮಾಡಲಾಗಿದೆ. ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅನುದಾನ ಲಭ್ಯತೆಯನುಸಾರ ಜುಲೈ 2022ರವರೆಗೆ ಮೊಟ್ಟೆ ಹಣ ಪಾವತಿಸಲಾಗಿದ್ದು, ಪ್ರಸ್ತುತ ಅನುದಾನ ಬಿಡುಗಡೆ ಮಾಡಲಾಗಿದ್ದು ಬಾಲ ವಿಕಾಸ ಸಮಿತಿಗೆ ಜಮೆ ಮಾಡಲು ಕ್ರಮವಹಿಸಲಾಗುತ್ತಿದೆ..

ಶಿವಮೊಗ್ಗ ಜಿಲ್ಲೆಯಲ್ಲಿ 7 ಶಿಶು ಅಭಿವೃದ್ಧಿ ಯೋಜನೆಗಳ ಪೈಕಿ ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯನ್ನು ಹೊರತುಪಡಿಸಿ ಉಳಿದ 6 ತಾಲ್ಲೂಕುಗಳಲ್ಲಿ ನವೆಂಬರ್-2022ರವರೆಗೆ ತರಕಾರಿ ಹಣವನ್ನು ಬಾಲವಿಕಾಸ ಸಮಿತಿ ಖಾತೆಗೆ ಜಮಾ ಮಾಡಲಾಗಿದೆ. ಶಿಕಾರಿಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅನುದಾನ ಲಭ್ಯತೆಯನುಸಾರ ಜುಲೈ 2022 ರವರೆಗೆ ತರಕಾರಿ ಹಣ ಪಾವತಿಸಲಾಗಿದ್ದು ಪ್ರಸ್ತುತ ಬಾಲ ವಿಕಾಸ ಸಮಿತಿಗೆ ಜಮೆ ಮಾಡಲು ಕ್ರಮವಹಿಸಲಾಗುತ್ತಿದೆ.

**ಗ್ಯಾಸ್ ಸಿಲಿಂಡರ್ ಹಣ ಬಿಡುಗಡೆಯಾಗದಿರುವ ಕುರಿತು:** ಭದ್ರಾವತಿ ತಾಲ್ಲೂಕಿನಲ್ಲಿ ಮಾತ್ರ ಬಾಲವಿಕಾಸ ಸಮಿತಿಗಳ ಖಾತೆಗೆ ಜಮಾ ಮಾಡಲಾಗುತ್ತಿದ್ದು, ನವೆಂಬರ್-2022ರವರೆಗೆ ಪಾವತಿಸಲಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಗ್ಯಾಸ್ ಸಿಲಿಂಡರ್ ಹಣವನ್ನು ಸಂಬಂಧಪಟ್ಟ ಗ್ಯಾಸ್ ಏಜೆನ್ಸಿಗಳಿಗೆ ನೇರವಾಗಿ ಹಣ ಜಮಾ ಮಾಡಲಾಗುತ್ತಿರುವ ಕಾರಣ ಇದರಲ್ಲಿ ಯಾವುದೇ ತೊಂದರೆಗಳು ಇರುವುದಿಲ್ಲ ಹಾಗೂ ಗ್ಯಾಸ್ ಸಿಲಿಂಡರ್ ಹಣವನ್ನು ಸಂಬಂಧಪಟ್ಟ ಗ್ಯಾಸ್ ಏಜೆನ್ಸಿಗೆ ನೇರವಾಗಿ ಪಾವತಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಭದ್ರಾವತಿ ಇವರಿಗೆ ಸೂಚಿಸಲಾಗಿದೆ.

**ಅಂಗನವಾಡಿ ಕೇಂದ್ರಗಳ ಸ್ಥಾನಗಳು ತೆರವಾಗಿರುವ ಜಾಗಕ್ಕೆ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರನ್ನು ಭರ್ತಿ ಮಾಡದೇ ಇರುವ ಕುರಿತು:** ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಮಾರ್ಗಸೂಚಿಗಳನ್ನು ಸರ್ಕಾರದ ದಿನಾಂಕ:03.12.2022ರ ಆದೇಶದಲ್ಲಿ ಪರಿಷ್ಕರಿಸಿ ಆದೇಶಿಸಲಾಗಿದೆ. ಅದರಂತೆ ಶಿವಮೊಗ್ಗ ಜಿಲ್ಲೆಯ 7 ಯೋಜನೆಗಳಲ್ಲಿ ಖಾಲಿಯಿದ್ದ 13 ಅಂಗನವಾಡಿ ಕಾರ್ಯಕರ್ತೆ ಮತ್ತು 61 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಿಲ್ಲಾ ಹಂತದಲ್ಲಿ ಕ್ರಮವಹಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಡಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕಡ್ಡಾಯವಾಗಿ PFMS ಮೂಲಕವೇ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ನಿರ್ದೇಶಿಸಲಾಗಿದೆ. ಅದಕ್ಕನುಗುಣವಾಗಿ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಬೇರ್ಪಡಿಸಿ ಹೊಸ ಲೆಕ್ಕ ಶೀರ್ಷಿಕೆಗಳನ್ನು 2022-23ನೇ ಸಾಲಿನ ಪೂರಕ ಅಂದಾಜು 1ನೇ ಕಂತಿನಲ್ಲಿ ಸೃಜಿಸಿ ದಿನಾಂಕ:19.10.2022ರ ಆರ್ಥಿಕ ಇಲಾಖೆಯ ಪತ್ರದಲ್ಲಿ ಹೊಸ ಲೆಕ್ಕ ಶೀರ್ಷಿಕೆಗಳನ್ನು ಅನುಷ್ಠಾನಗೊಳಿಸಲು ಸಹಮತಿ ನೀಡಿದ ಮೇರೆಗೆ ಹಾಗೂ ಕೆಲವು ತಾಂತ್ರಿಕ / ಆಡಳಿತಾತ್ಮಕ ಕಾರಣಗಳಿಂದಾಗಿ ಅನುದಾನ ಬಿಡುಗಡೆ ವಿಳಂಬವಾಗಿದ್ದು, ಮುಂಬರುವ ದಿನಗಳಲ್ಲಿ ಸಕಾಲದಲ್ಲಿ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗಿದೆ.

**ಸಂಖ್ಯೆ: ಮಮಇ 405 ಐಸಿಡಿ 2022**

Halappa B

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು